# ಸುದ್ದಿ ಸಂಚಯ

## ಮಂಗಳೂರಿನಲ್ಲಿ ವಿಚಾರಸಂಕಿರಣಗಳು

**ಮಂ**ಗಳೂರಿನ ರಾಮಕೃಷ್ಣ ಮಠವು ಯುವಕರಿಗಾಗಿ ಮತ್ತು ಶಿಕ್ಷಕರಿಗಾಗಿ ವಿಚಾರ ಸಂಕಿರಣಗಳನ್ನು ಮೂರು ದಿನಗಳ ಕಾಲ ಏರ್ಪಡಿಸಿತ್ತು. ಸ್ವಾಮಿ ವಿವೇಕಾನಂದರು ಸೆಪ್ಟೆಂಬರ್ ೧೧, ೧೮೯೩ ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಐತಿಹಾಸಿಕ ಭಾಷಣದ ಸ್ಮರಣೆಗಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಬಿ.ಎಡ್. ವಿದ್ಯಾರ್ಥಿಗಳಿಗಾಗಿ ಸೆಪ್ಟೆಂಬರ್ ೯ ರಂದು ನಡೆದ ವಿಚಾರ ಸಂಕಿರಣವನ್ನು ಕರ್ನಾಟಕ ಸರ್ಕಾರದ ಬಂದರು ಮತ್ತು ಪರಿಸರ ಮಂತ್ರಿಗಳಾದ ಶ್ರೀ ಕೃಷ್ಣ ಪಾಲೇಮಾರ್ ಅವರು ಉದ್ಘಾಟಿಸಿದರು. ಇದರಲ್ಲಿ ಸುಮಾರು ೫೫೦ ಬಿ.ಎಡ್. ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ. ಗುರುರಾಜ ಕರ್ಜಗಿ ಅವರು 'ಬೋಧನೆಯಲ್ಲಿ ನೈತಿಕತೆ' ಎಂಬ ವಿಷಯವಾಗಿ, ಪ್ರೊ. ಶ್ರೀರಾಮ ಕಾರಂತ ಅವರು 'ಶಿಕ್ಷಣದಲ್ಲಿ ಮಾನವ ಸಂಪನ್ಮೂಲದ ಮೌಲ್ಯಗಳು' ಎಂಬ ವಿಷಯವಾಗಿ ಮತ್ತು ಕಾಜಂಪಾಡಿ ಸುಬ್ರಮಣ್ಯ ಭಟ್ ಅವರು 'ಪ್ರಾಚೀನ ಭಾರತದ ಸಾಧನೆಗಳು' ಎಂಬ ವಿಷಯವಾಗಿ ಭಾಷಣ ಮಾಡಿದರು.

ಸೆಪ್ಟೆಂಬರ್ ೧೦ ರಂದು ನಡೆದ ಪ್ರೌಢಶಾಲಾ ಶಿಕ್ಷಕರ ಸಮಾವೇಶವನ್ನು ಶಿಕ್ಷಣ ಮಂತ್ರಿಗಳಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಉದ್ಘಾಟಿಸಿದರು. ಇದರಲ್ಲಿ ಸುಮಾರು ೫೦೦ ಶಿಕ್ಷಕರು ಭಾಗವಹಿಸಿದ್ದರು. ಡಾ. ಗುರುರಾಜ ಕರ್ಜಗಿ ಮತ್ತು ಪ್ರೊ. ರಘೋತ್ತಮ ರಾವ್ ಅವರು ಕ್ರಮವಾಗಿ, 'ಇಪ್ಪತ್ತೊಂದನೆಯ ಶತಮಾನದಲ್ಲಿ ಶಿಕ್ಷಕರು ಎದುರಿಸುವ ಸವಾಲು' ಮತ್ತು 'ಬೋಧನೆಯಲ್ಲಿ ಆನಂದ' ಎಂಬ ವಿಷಯಗಳನ್ನು ಕುರಿತು ಮಾತನಾಡಿದರು. ಸಮಾಜ ಸೇವೆಯ ಅಧ್ಯಯನದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ ೧೧ ರಂದು ನಡೆದ ವಿಚಾರ ಸಂಕಿರಣವನ್ನು ಮೂಡಬಿದರಿಯ ಆಳ್ವಾಸ್ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷರಾದ ಡಾ. ಎಮ್. ಮೋಹನ್ ಆಳ್ವ ಅವರು ಉದ್ಘಾಟಿಸಿದರು. ಇದರಲ್ಲಿ ೬೫೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ. ಗುರುರಾಜ ಕರ್ಜಗಿ ಅವರು 'ಕಾರ್ಯಕ್ಷೇತ್ರದಲ್ಲಿ ಆಧ್ಯಾತ್ಮಿಕತೆ' ಎಂಬ ವಿಷಯವಾಗಿ, ಪ್ರೊ. ರಘೋತ್ತಮ ರಾವ್ ಅವರು 'ಬೆಳ್ಳಿ ರೇಖೆ' ಎಂಬ ವಿಷಯವಾಗಿ ಮತ್ತು ಶ್ರೀ ಚಕ್ರವರ್ತಿ ಸೂಲಿಬೆಲೆ ಅವರು 'ವಿಶ್ವವಿಜೇತ ಸ್ವಾಮಿ ವಿವೇಕಾನಂದ' ಎಂಬ ವಿಷಯವಾಗಿ ಭಾಷಣ ಮಾಡಿದರು.

## ಮೈಸೂರಿನಲ್ಲಿ 'ಸ್ಫೂರ್ತಿಗಂಗಾ'

ಸೆಪ್ಟಂಬರ್ ೧೩ ರಂದು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ **'ಸ್ಫೂರ್ತಿ ಗಂಗಾ'** ಎಂಬ ಹೆಸರಿನ ವ್ಯಕ್ತಿತ್ವ ವಿಕಸನ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾಲೇಜು ವಿದ್ಯಾರ್ಥಿಗಳಿಗೆಂದೇ ವಿಶೇಷವಾಗಿ ನಡೆಸಲಾದ ಒಂದು ದಿನದ ಈ ಕಾರ್ಯಕ್ರಮವನ್ನು ಆಶ್ರಮದ **'ವಿವೇಕಾನಂದ ಯುವ ವೇದಿಕೆ'** ಸದಸ್ಯರು ಬಹು ಶ್ರಮಪಟ್ಟು ಆಯೋಜಿಸಿದ್ದರು. ಸುಮಾರು ೨೫೦ ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಕಾರ್ಯಾಗಾರದ ಉದ್ಘಾಟನೆಯನ್ನು ಕೊಡಗಿನ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಜಗದಾತ್ಮಾನಂದಜಿ ಅವರು ಮಾಡಿದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು.

ಮೊದಲನೆಯ ಸಮಾವೇಶದಲ್ಲಿ ಸುಪ್ರಸಿದ್ಧ ಭಾಷಣಕಾರರಾದ ಶ್ರೀ ಸೂಲಿಬೆಲೆ ಚಕ್ರವರ್ತಿ ಅವರು 'ಆಧುನಿಕತೆ ಮತ್ತು ವ್ಯಕ್ತಿತ್ವ ವಿಕಸನ' ಎಂಬ ವಿಷಯವಾಗಿ ಅತ್ಯಂತ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಎರಡನೆಯ ಸಮಾವೇಶದಲ್ಲಿ 'ವೇದಾಂತ ಕೇಸರಿ' ಆಂಗ್ಲಪತ್ರಿಕೆಯ ಸಂಪಾದಕರಾದ ಸ್ವಾಮಿ ಆತ್ಮಶ್ರದ್ಧಾನಂದಜಿ ಅವರು ವೇದಾಂತ ತತ್ತ್ವಗಳನ್ನು ಆಧರಿಸಿದ ವ್ಯಕ್ತಿತ್ವ ವಿಕಸನದ ಮಹತ್ವದ ಅರಿವು ಮಾಡಿಕೊಟ್ಟರು. ಭೋಜನ ವಿರಾಮದ ನಂತರ ವಿಡಿಯೋ ಪ್ರದರ್ಶನವಿತ್ತು. ಮೂರನೆಯ ಸಮಾವೇಶದಲ್ಲಿ ಧಾರವಾಡದ ಪ್ರಸಿದ್ಧ ವಾಗ್ಮಿಗಳು ಮತ್ತು ಶಿಕ್ಷಣ ತಜ್ಞರೂ ಆದ ಶ್ರೀ ಸುರೇಶ್ ಕುಲಕರ್ಣಿ ಅವರು ಸೃಜನಾತ್ಮಕ ಕಲಿಕೆ ಮತ್ತು ಚಿಂತನೆಯ ಬಗೆಗೆ ಸೋದಾಹರಣವಾಗಿ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ನಂತರ ಸ್ವಾಮಿ ಮುಕ್ತಿದಾನಂದಜಿ ಮತ್ತು ಸ್ವಾಮಿ ಆತ್ಮಶ್ರದ್ಧಾನಂದಜಿ ಅವರು ಪ್ರತಿನಿಧಿಗಳ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ನೀಡಿದರು.

ಭಾಗವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಗೂ ಉಚಿತ ಪುಸ್ತಕಗಳು ಮತ್ತು ಸರ್ಟಿಫಿಕೇಟ್ ಅನ್ನು ನೀಡಲಾಯಿತು.

## 'ಜ್ಞಾನಸುಧಾ' ಬಹುಮಾನ ವಿತರಣಾ ಕಾರ್ಯಕ್ರಮ

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ೨೦೦೪ ನೆ ಇಸವಿಯಿಂದ **'ಶ್ರೀಶಾರದಾ ಜ್ಞಾನಸುಧಾ'** ಎಂಬ ಲಿಖಿತ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಈ ವರ್ಷ ೪೫,೦೦೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ೭ ನೆಯ ತರಗತಿಯಿಂದ ೧೦ ನೆಯ ತರಗತಿಯ ವಿದ್ಯಾರ್ಥಿಗಳಿಗೆ ಸ್ಪರ್ಧೆಯು, **'ವಿದ್ಯಾಭ್ಯಾಸ'** ಎಂಬ ಪುಸ್ತಕವನ್ನು ಆಧರಿಸಿಯೂ, ೧೧ ಮತ್ತು ೧೨ ನೆಯ ತರಗತಿಯ ವಿದ್ಯಾರ್ಥಿಗಳಿಗೆ **'ಧರ್ಮ'** ಎಂಬ ಪುಸ್ತಕವನ್ನು ಆಧರಿಸಿಯೂ ನಡೆಯಿತು.

ದಿನಾಂಕ ೨. ೧೦. ೨೦೦೮ ರಂದು ಆಶ್ರಮದಲ್ಲಿ ನಡೆದ ಸಮಾರಂಭದಲ್ಲಿ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಪ್ರೊ. ವಸಂತಕುಮಾರ್ ಅವರು ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದರು. ✪